**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 2991/2022**

ಸರ್ಕಾರದ ಪರ
ಕುಂದಾಪುರ ವಲಯ. --- ಪಿರ್ಯಾದಿದಾರರು

-ಮತ್ತು-

ವಿಠಲ ಮೊಗವೀರ, 55 ವರ್ಷ,
ತಂದೆ: ನಾರಾಯಣ ಮೊಗವೀರ,
ವಾಸ: ಕೊಡ್ಲು, ಜನನಿ ಮನೆ,
ಹೊಸಾಡು ಗ್ರಾಮ, ಕುಂದಾಪುರ ತಾಲೂಕು. --- ಆರೋಪಿತರು

**:ದೋಷಾರೋಪಣೆ:**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್‌ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ:**

ದಿನಾಂಕ 10.06.2021 ರಂದು ಸಂಜೆ 07.30 ರ ಸಮಯದಲ್ಲಿ ಕುಂದಾಪುರ ತಾಲೂಕು, ಹೊಸಾಡು ಗ್ರಾಮದ ಕೊಡ್ಲು ಎಂಬಲ್ಲಿರುವ ಜನನಿ ಮನೆಯ ಪೂರ್ವ ಭಾಗದಲ್ಲಿರುವ ಸಿಮೆಂಟ್ ಶೀಟಿನ ಶೆಡ್‌ನ ಒಳಗಡೆ ಹಾಗೂ ಮನೆಯ ಮುಂಭಾಗದಲ್ಲಿ ನಿಲ್ಲಿಸಲಾದ ಕೆಎ 20 ಇಇ 8160 ತಿಳಿ ಗುಲಾಬಿ ಬಣ್ಣದ ಹೋಂಡ ಮೆಸ್ಟ್ರಿಕ್ ಎಂಬ ಹೆಸರಿರುವ ದ್ವಿಚಕ್ರ ವಾಹನದಲ್ಲಿ 90 ಮಿಲಿಯ ಮದ್ಯ ತುಂಬಿದ 174 ಟೆಟ್ರಾ ಪ್ಯಾಕೇಟುಗಳು ಮತ್ತು 180 ಮಿಲಿಯ ಮದ್ಯ ತುಂಬಿದ 26 ಟೆಟ್ರಾ ಪ್ಯಾಕೇಟ್ ಗಳು ಹಾಗೂ 650 ಮಿಲಿಯ ಯ.ಬಿ. ಎಕ್ಸ್ ಪರ್ಟ ಸ್ಟ್ರಾಂಗ್ ಬಿಯರ್ ನ 22 ಬಾಟಲಿಗಳು ಒಟ್ಟು 20.340ಲೀ ಮದ್ಯ ಹಾಗೂ 14.300 ಲೀ ಬೀರ್ ಹೊಂದಿ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಇರಿಸಿರುವುದು ಕಂಡುಬಂದಿರುತ್ತದೆ. ನಂತರ ದೊರೆತ 20.340 ಲೀ ಮದ್ಯ ಹಾಗೂ 14.300 ಲೀ ಬಿಯರ್ ಗಳಲ್ಲಿ 14.980 ಲೀ ಮದ್ಯ ಹಾಗೂ 1.950 ಲೀ ಬೀಯರನ್ನು ರಾಸಾಯನಿಕ ವಿಶ್ಲೇಷಣಾ ವರದಿಗಾಗಿ ಸ್ಥಳದಲ್ಲಿಯೇ ಮಾದರಿ ತೆಗೆಯಲಾಯಿತು. ದೊರೆತ ಎಲ್ಲಾ ಮದ್ಯವನ್ನು ಹಾಗೂ ದ್ವಿಚಕ್ರ ವಾಹನವನ್ನು ಸ್ಥಳ ಮಹಜರು ಪ್ರಕ್ರಿಯೆಯೊಂದಿಗೆ ಇಲಾಖಾ ವಶಕ್ಕೆ ವಶಪಡಿಸಿಕೊಂಡಿದ್ದು. ಆ ಮೂಲಕ ಆರೋಪಿತರಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 11, 14, 15, 32(1), 34 ಹಾಗೂ 38(ಎ), ಯಂತೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 22.12.2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

1ನೇ ಕುಂದಾಪುರ.ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :2991/2021**

ಫಿರ್ಯಾದುದಾರರು : ಸರಕಾರದ ಪರವಾಗಿ ಕುಂದಾಪುರ ವಲಯ

- ವಿರುದ್ಧ-

ಆರೋಪಿ : ವಿಠಲ ಮೊಗವೀರ, ತಂದೆಃ ನಾರಾಯಣ ಮೊಗವೀರ,

**1.** ಮೇಲೆ ಹೇಳಿದಂತೆ ನಿಮಗೆ ಓಡಿ ಹೇಳಿ ವಿವರಿಸಿದ ದೋಷಾರೋಪಣಾ ಸಾರಾಂಶವನ್ನು ಅರ್ಥಮಾಡಿಕೊಂಡಿರಾ**?**

ಉ**.**

**2.** ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ ರತಿರಕ್ಷೆ ಇದೆಯಾ**.?**

ಉ**.**

ಮೇಲ್ಕಂಡ ದೋಷಾರೋಪಣಾ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.